**ದಿ: 19-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ವಾಟೀಸವಾಲು: ಶ್ರೀ ಬಿ ಎಸ್ ಡಿ ವಕೀಲರಿಂದ:**

1. ಈ ದಾವೆಯನ್ನು ಆಸ್ತಿ ಬೇಕು ಎಂದು ನನ್ನ ತಾಯಿ ಲಚಮವ್ವ ಇವರ ಮೇಲೆ ಹಾಕಿದ್ದೆ ನನ್ನ ತಾಯಿ ತೀರಿಕೊಂಡಿರುತ್ತಾಳೆ. ನಾನು ಹೋಸಪೇಟೆಯಲ್ಲಿ 20 ವರ್ಷದಿಂದ ಇದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಆಂಗ್ಲ ಭಾಷೆಯಲ್ಲಿ ಬರೆದಿದ್ದು ಕನ್ನಡ ಭಾಷೆಯಲ್ಲಿ ಓದಿ ಹೇಳಿದ್ದಾರೆ. ಈ ದಾವೆಯನ್ನು ಹೊಲ ಮತ್ತು ಮನೆ ಮತ್ತು ನನ್ನ ತಲಯಿಗೆ ಸೇರಿದ 4 ತೊಲೆ ಬಂಗಾರ ಬರಬೇಕೆಂದು ಸೇರಿಸಿದ್ದೇನೆ. ದಾವಾ ಹೊಲದ ಸರ್ವೆ ನಂಬರ್ 56, ಅದರ ವಿಸ್ತೀರ್ಣ 04 ಎಕರೆ 17 ಗುಂಟೆ ಲಿಂಗದಹಳ್ಳಿ ಸೀಮಾಂತರದಲ್ಲಿ ಬರುತ್ತದೆ. ದಾವಾ ಹೊಲ ಮೊದಲು ನನ್ನ ತಾಯಿ ಹೆಸರಿನಲ್ಲಿತ್ತು. ಈಗ ನನ್ನ ಅಣ್ಣ ತಿಮ್ಮಣ್ಣ ತನ್ನ ಹೆಸರಿಗೆ ಮಾಡಿಕೊಂಡಿದ್ದಾನೆ. ನನ್ನ ತಾತನ ಹೆಸರಿ ತಿಮ್ಮಣ್ಣ ಅವರು ಈಗ ತೀರಿಕೊಂಡಿರುತ್ತಾರೆ. ನಾನು ಹುಟ್ಟುವುದಕ್ಕಿಂತ ಪೂರ್ವದಲ್ಲಿಯೇ ಅವರು ತೀರಿಕೊಂಡಿರುತ್ತಾರೆ. ನನ್ನ ಅಜ್ಜಿಯ ಹೆಸರು ನಂದಮ್ಮ. ನನ್ನ ಅಜ್ಜಿಗೆ 4 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಗಂಡು ಮಕ್ಕಳ ಹೆಸರು ಗೊವಿಂದಪ್ಪ, ಯಂಕಪ್ಪ, ಹನುಮಂತಪ್ಪ ಮತ್ತು ಮುದ್ದರಂಗಪ್ಪ, ಹೆಣ್ಣು ಮಕ್ಕಳ ಹೆಸರು ಗಿರಿಯಮ್ಮ ಮತ್ತು ಯಂಕಮ್ಮ ಅಂತಾ ಇರುತ್ತದೆ. ಹನುಮಂತಪ್ಪ ಅವರು ತೀರಿಕೊಂಡು ಎಷ್ಟು ವರ್ಷ ಆಗಿದೆ ಗೊತ್ತಿಲ್ಲ, ಮುದ್ದರಂಗಪ್ಪ ಜೀವಂತವಾಗಿದ್ದಾರೆ, ಗೋವಿಂದಪ್ಪ 10 ವರ್ಷದ ಹಿಂದೆ ತೀರಿಕೊಂಡಿದ್ದಾರೆ. ನನ್ನ ತಂದೆ ಯಂಕಪ್ಪ 16 ವರ್ಷದ ಹಿಂದೆ ತೀರಿಕೊಂಡಿದ್ದಾರೆ. ಗಿರಿಯಮ್ಮಳನ್ನು ಸಲಿಕ್ಯಾಪುರ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಲಾಗಿತ್ತು ತೀರಿಕೊಂಡು ಬಹಳಷ್ಟು ವರ್ಷ ಆಗಿದೆ. ಅವರಿಗೆ 4 ಜನ ಗಂಡು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು ಇದ್ದಾರೆ ಅವರ ಹೆಸರು ಗೊತ್ತಿಲ್ಲ. ಯಂಕಮ್ಮಳನ್ನು ಗಲಗ ಗ್ರಾಮಕ್ಕೆ ಕೊಟ್ಟು

ಮದುವೆ ಮಾಡಲಾಗಿದೆ, ಆಕೆಯ ಗಂಡನ ಹೆಸರು ಗೊತ್ತಿಲ್ಲ ನಾನು ಹುಟ್ಟುವ ಪೂರ್ವದಲ್ಲಿಯೇ ಅವರು ತೀರಿಕೊಂಡಿರುತ್ತಾರೆ. ಅವರಿಗೆ 4 ಜನ ಗಂಡು ಮಕ್ಕಳು ಒಬ್ಬರು ಹೆಣ್ಣು ಮಗಳು ಇದ್ದಾರೆ.

2. ವಾದ ಪತ್ರದ ವಂಶಾವಳಿಯಲ್ಲಿ ತಿಮ್ಮಪ್ಪನ 4 ಜನ ಗಂಡು ಮಕ್ಕಳನ್ನು ಮಾತ್ರ ತೋರಿಸಿದ್ದೀರಿ ಇಬ್ಬರು ಹೆಣ್ಣು ಮಕ್ಕಳನ್ನು ತೋರಿಸಿಲ್ಲ ಎಂದರೆ ಸರಿ. ದಾವಾ ಆಸ್ತಿ ನನ್ನ ತಾತಾ ತಿಮ್ಮಣ್ಣನಿಗೆ ಸೇರಿರುತ್ತದೆ. ದಾವಾ ಆಸ್ತಿಯು ನಿಮ್ಮ ತಾತಾ ತಿಮ್ಮಣ್ಣನಿಗೆ ಸೇರಿರುತ್ತದೆಯೇ ಎಂದು ತೋರಿಸಲು ನ್ಯಾಯಾಲಯಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರು ಮಾಡಿದ್ದಿರಾ ಎಂದರೆ ಸಾಕ್ಷಿಯು ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ತಿಮ್ಮಣ್ಣನ ಹೆಸರಿಗೆ ಇರುವ ದಾಖಲಾತಿಗಳನ್ನು ನೀವು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಮನೆ ತಿಮ್ಮಣ್ಣನ ಹೆಸರಿಗೆ ಇದೆ ಎಂದು ದಾಖಲಾತಿ ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ.

ಮುಂದುವರಿದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ